ದಿನಾಂಕ: 12.06.2023

ಅಸಲು ದಾವೆ : 48/2015 ಪಿ.ಡಬ್ಲ್ಯೂ.1

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : 1, 4, 5, 8, 9, 11 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಎಸ್ ರವರಿಂದ:**

ಹಾಜರು ಮಾಡಿದ ಕುಟುಂಬದ ವಂಶವೃಕ್ಷ ನಮ್ಮಗಳ ಮತ್ತು ಪ್ರತಿವಾದಿಗಳ ಸಂಬಂಧವನ್ನು ವಾಸ್ತಾವ ಸಂಬಂಧಕ್ಕೆ ಅನುಗುಣವಾಗಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.2 ಯಾದಿ ಕೆಂಪನದಾಸಿ ಅವರ ಹೆಸರಿನಲ್ಲಿ ಇದ್ದು , ಅದು ನನ್ನ ತಾತನ ತಂದೆ ಎಂದರೆ ಸರಿ . ಸಾಕ್ಷಿಯು ಸ್ವತಃ ನನ್ನ ತಾತನ ತಂದೆಯ ಹೆಸರು ಯಾದಿ ಕೆಂಪನದಾಸಿ ಉರುಫ್ ಕೆಂಪಶೆಟ್ಟಿ ಆಗಿರುತ್ತದೆ. ನಿಪಿ.3 ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ನನ್ನ ತಂದೆ ಅಥವಾ ನನ್ನ ತಾತನ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿಯು ಅವರ ಹೆಸರುಗಳನ್ನು ಕೈಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.3, 1964 ರ ಕ್ರಯ ಪತ್ರದ ನಂತರದಲ್ಲಿ ಅವರ ಮಾಲೀಕತ್ವ ಮತ್ತು ಸ್ವಾಧೀನಕ್ಕೆ ಅನುಗುಣವಾಗಿ ಆಗಿರುವ ಎಂ.ಆರ್.ಎಕ್ಸ್ಟ್ರಾಕ್ಟ್ ಎಂದರೆ ಸಾಕ್ಷಿಯು ನನ್ನ ತಾತನ ಮತ್ತು ತಂದೆಯ ಹೆಸರನ್ನು ಕೈಬಿಟ್ಟಿದ್ದು ನಮಗೆ ಗೊತ್ತಿಲ್ಲದೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಎಂ.ಆರ್.9/1984-85 ಅನ್ನು 1984 ರ ನಂತರ ನಾನಗಲೀ ನನ್ನ ತಂದೆಯಾಗಲೀ ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೆ ಖಾತೆ ಮಾಡಿಕೊಂಡಿರುತ್ತಾರೆ ಹಾಗಾಗಿ ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.5 ನನ್ನ ತಾತನ ಸಹೋದರ ಮರಿಶೆಟ್ಟಿ @ ಮರಯ್ಯ ಅವರ ಭಾಗಾಂಶಕ್ಕೆ ಸೇರಿದ ಬಗ್ಗೆ ಆಗಿರುವ ದಾಖಲೆ ಆಗಿರುತ್ತದೆ ಎಂದರೆ ಸಾಕ್ಷಿಯು ಅವರಿಗೆ ಸೇರಿರುವುದಿಲ್ಲ, ಅದು ತಪ್ಪು ದಾಖಲೆ ಎಂದು ನುಡಿಯುತ್ತಾರೆ. ಸದರಿ ನಿಪಿ.5 ನ್ನು ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ 2015 ರಲ್ಲಿ ಗೊತ್ತಾಗಿರುತ್ತದೆ , ಹಾಗಾಗಿ ಪ್ರಶ್ನೆ ಮಾಡಿರುವುದಿಲ್ಲ. ನಿಪಿ.6 ದಾಖಲೆಗೂ ದಾವಾ ಆಸ್ತಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.6 ರಲ್ಲಿ ಕಾಣುವ ಆಸ್ತಿ ನಿಂಗಮ್ಮ ಕೋಂ ದಾಸಶೆಟ್ಟಿ ಅವರಿಗೆ ಕ್ರಯದ ಮೂಲಕ ಬಂದಿದ್ದು , ಸದರಿ ಆಸ್ತಿ ಈ ದಾವಾ ಷೆಡ್ಯೂಲ್ ಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ.7 ರಲ್ಲಿ ಕಾಣುವ ಆಸ್ತಿ ಪ್ರತಿವಾದಿ 16 ರಿಂದ 20 ರವರ ತಂದೆ ಖರೀದಿ ಮಾಡಿರುವ ಆಸ್ತಿ ಎಂದರೆ ಸರಿಯಲ್ಲ. ನಿಪಿ.9 ರಲ್ಲಿ ಕಾಣುವ ಆಸ್ತಿ ನನ್ನ ತಾತನ 2ನೇ ಸಹೋದರ ಕೆಂಪಶೆಟ್ಟಿ ಮಗ ಕೆ.ರಾಮಶೆಟ್ಟಿ ನನ್ನ ತಂದೆಯಿಂದ ಖರೀದಿಸಿದ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ನಾವು ಯಾವುದೇ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.9 ರಲ್ಲಿ ಕಾಣುವ ಆಸ್ತಿ 3 ಗುಂಟೆ ಅನ್ಯಕ್ರಾಂತ ಆಗಿ ಉಳಿಕೆ ಆರ್.ಟಿ.ಸಿ ಯಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ನಿಪಿ.10 ರಲ್ಲಿ ಅನ್ಯಕ್ರಾಂತ ಆಗಿರುವ ಬಗ್ಗೆ ಮತ್ತು ಉಳಿಕೆ ಜಮೀನು ಇರುವ ಬಗ್ಗೆ ಸದರಿ ದಾಖಲೆಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.13 ದಾವಾ ಆಸ್ತಿಗೆ ಬಾಜುದಾರರಾದ ಇ.ರಾಜು ಅವರಿಗೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ . ನಿಪಿ.14, 391/2ಎ ಪ್ರತಿವಾದಿ 17 ರಿಂದ 20 ರವರ ತಂದೆಗೆ ಸೇರಿದ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸರ್ವೆ ನಂಬರ್ 391/2ಎ ದಾಸಶೆಟ್ಟಿ ಅವರಿಗೆ ಹೇಗೆ ಬಂದಿರುತ್ತದ ಎಂದು ಮೂಲ ದಾಖಲೆ ಹಾಜರು ಮಾಡಿರುವುದ್ಲಿ ಎಂದರೆ ಸರಿಯಲ್ಲ. ನಿಪಿ.17 ಪ್ರತಿವಾದಿ 16 ರವರ ಗಂಡ ದಾಸಶೆಟ್ಟಿ ಯವರ ತಂದೆ ಮರಿಶೆಟ್ಟಿ ಮರಯ್ಯ ಅವರಿಗೆ ಸೇರಿದ ಸ್ವತ್ತನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೆ ತಪ್ಪಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.17 ರಲ್ಲಿ ಇರುವ ಆಸ್ತಿಯ ಎಂ.ಆರ್. ಮತ್ತು ಆರ್.ಟಿ.ಸಿ ಯನ್ನು ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಈ ದಾವೆ ಹಾಕುವ ಕಾಲಕ್ಕೆಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.